ಮೂ. ದಾ. ನಂ. 53/2014

ಡಿ.ಡಬ್ಲ್ಯು 4

(ಇಂದು ದಿನಾಂಕ 25-11-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಜಿ.ಹೆಚ್. ವಕೀಲರಿಂದಃ**

8 ನೇ ಪ್ರತಿವಾದಿ ನನ್ನ ತಾಯಿ. ನನ್ನ ತಾಯಿಯವರು ಮನೆಯಲ್ಲಿ ಓಡಾಡಿಕೊಂಡು ಇದ್ದಾರೆ ಎಂದರೆ ಅವರಿಗೆ ಹೆಚ್ಚಾಗಿ ಓಡಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯವರು ವಾಹನದಲ್ಲಿ ನ್ಯಾಯಾಲಯದಲ್ಲಿ ಬಂದು ಸಾಕ್ಷ್ಯ ಹೇಳುವಷ್ಟು ಶಕ್ಯ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಯವರಿಗೆ ಯಾವುದೇ ಶೀಕು ಇರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಯಾವುದೇ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. 8 ನೇ ಪ್ರತಿವಾದಿಯು ನ್ಯಾಯಾಲಯುಕ್ಕೆ ಬಂದಲ್ಲಿ ಸತ್ಯಾಂಶ ಘೋಚರ ಆಗುತ್ತದೆ ಎಂಬ ಉದ್ದೇಶದಿಂದ ಆಕೆಯ ಪರವಾಗಿ ನಾನು ಮೊಕ್ತ್ಯಾರನಾಮೆಯನ್ನು ಪಡೆರುತ್ತೇನೆ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆಗೆ ಲಿಖಿತ ತಕರಾರನ್ನು ಸಲ್ಲಿಸಲು ನನ್ನ ತಾಯಿಯವರು ಮಾಹಿತಿಯನ್ನು ನೀಡಿರುತ್ತಾರೆ. ನಾನು ವಾದ ಪತ್ರ ಹಾಗೂ ಉದಾಹರಣೆಯನ್ನು ಓದಿ ತಿಳಿದುಕೊಂಡಿರುತ್ತೇನೆ. ವಾದಿ ಮತ್ತು 1 ನೇ ಪ್ರತಿವಾದಿಯ ಕುಟುಂಬದ ಬಗ್ಗೆ ನನಗೆ ವಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. 8 ನೇ ಪ್ರತಿವಾದಿಯು ನಿ.ಪಿ. 8 ರಂತೆ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ವಕೀಲರಿಂದ ಸಲಹೆ ಪಡೆದುಕೊಂಡಿರುವುದಿಲ್ಲ. ನನ್ನ ತಾಯಿಯವರು ಸ್ವತ್ತನ್ನು ಖರೀದಿ ಮಾಡಲು ಗಣೇಶ ಗಣಪತಿ ಮಡಿವಾಳ ಎಂಬುವವರು ಮುಂದಾಗಿ ವ್ಯವಹಾರಗಳನ್ನು ಮಾಡಿರುತ್ತಾರೆ. 3 ಗುಂಟೆಗೆ 90 ಸಾವಿರ ರೂ. ಗಳನ್ನು ನೀಡಿ ಖರೀದಿ ಮಾಡಿರುತ್ತೇವೆ. ನಿ.ಪಿ. 8 ರಲ್ಲಿ ನಮೂದಿಸಲಾದ ಕ್ರಯದ ಪ್ರತಿಫಲಕ್ಕೆ ಕ್ರಯದ ವ್ಯವಹಾರ ಆಗಿದ್ದು, ಬೇರೆ ಮೊತ್ತಕ್ಕೆ ವ್ಯವಹಾರ ಆಗಿರುವುದಿಲ್ಲ.

8 ನೇ ಪ್ರತಿವಾದಿಯು ಖರೀದಿ ಮಾಡಿದಂತಹ ಸ್ವತ್ತಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಗೆ ಯಾವ ರೀತಿ ಹಕ್ಕು ಬಂದಿತು ಎಂದು ನಾನು ತಿಳಿದುಕೊಂಡಿರುವುದಿಲ್ಲ. 1 ನೇ ಪ್ರತಿವಾದಿಗೆ ಯಾವುದೇ ಗಂಡು ಸಂತತಿ ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿಯ ಮನೆ ಆಜು ಬಾಜುವಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ. 8 ರಲ್ಲಿ ನಮೂದಿಸಲಾದ ಕ್ರಯದ ಮೊತ್ತವನ್ನು 1 ನೇ ಪ್ರತಿವಾದಿಗೆ ಸಂದಾಯ ಮಾಡಿರುತ್ತೇವೆ. 1 ನೇ ಪ್ರತಿವಾದಿಗೆ ಕ್ರಯದ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ನಾನು, ನನ್ನ ತಾಯಿ ಮತ್ತು ಗಣೇಶ ಮಡಿವಾಳ ರವರು ಇದ್ದರು.

ನಿ.ಪಿ 8 ಕ್ರಯದ ಪತ್ರವನ್ನು ನೊಂದಣಿ ಮಾಡುವ ಸಂದರ್ಭದಲ್ಲಿ 1 ನೇ ಪ್ರತಿವಾದಿ ಅಂದರೆ ನಾಗಪ್ಪ ನಾರಾಯಣ ಗುನಗಾ ಉಪನೋಂದಣಾಧಿಕಾರಿಗಳ ಕಚೇರಿಗೆ ಬಂದಿರಲಿಲ್ಲ. ನಾವು ಖರೀದಿ ಮಾಡಿದಂತಹ ಸ್ವತ್ತು 1 ನೇ ಪ್ರತಿವಾದಿಯ ತಂದೆ ನಾರಾಯಣ ಗುನಗಾರವರಿಗೆ ಪಿತ್ರಾರ್ಜಿತವಾಗಿ ಪ್ರಾಪ್ತವಾದ ಸ್ವತ್ತು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾರಾಯಣ ಗುನಗಾ ರವರು ಮೃತರಾದ ನಂತರ ಅವರಿಗೆ ಸೇರಿದ ಸ್ವತ್ತಿನ ಖಾತೆಯು 1 ನೇ ಪ್ರತಿವಾದಿ ಹಾಗೂ ಆತನ ಸಹೋದರರ ಹೆಸರಿಗೆ ಸಾಮೂಹಿಕ ನಾತೆಯಿಂದ ಬದಲಾವಣೆಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾರಾಯಣ ಗುನಗಾ ಮತ್ತು ಅವರ ಸಹೋದರರ ನಡುವೆ ಆದ ವಿಭಾಗದಲ್ಲಿ ದಾವಾ ಸ್ವತ್ತುಗಳು ಹಾಗೂ ನಾವು ಖರೀದಿ ಮಾಡಿದ ಸ್ವತ್ತು ನಾರಾಯಣ ಗುನಗಾ ರವರ ಹಿಸ್ಸೆಗೆ ಬಂದಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾರಾಯಣ ಗುನಗಾ ಮತ್ತು ಅವರ ಸಹೋದರರ ನಡುವೆ ಆದ ವಿಭಾಗದ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯವರು ಖರೀದಿ ಮಾಡಿದ 3 ಗುಂಟೆ ಸ್ಥಳದ ಸ.ನಂ. ಖರೀದಿ ಮಾಡುವ ಪೂರ್ವದಲ್ಲಿ 11/10/ಇ ಎಂದು ಇದ್ದು, ನಾವು ಖರೀದಿ ಮಾಡಿದ ನಂತರ ಅದಕ್ಕೆ ಸರ್ವೇ.ನಂ. 11/13 ಎಂದು ಸಂಖ್ಯೆಯನ್ನು ನೀಡಲಾಗಿರುತ್ತದೆ. ನಾವು ಖರೀದಿ ಮಾಡಿದ ಸ.ನಂ. ನಲ್ಲಿ ಒಟ್ಟು 21 ಗುಂಟೆ ಕ್ಷೇತ್ರ ಇತ್ತು. ನಾರಾಯಣ ಗುನಗಾ ರವರ ಹಿಸ್ಸೆಗೆ ಬಂದಂತಹ ಸ್ವತ್ತುಗಳ ಪೈಕಿ ನಾವು ಖರೀದಿ ಮಾಡಿದ ಸ್ವತ್ತಿನ ಸರ್ವೇ ನಂಬರಿನ ಕ್ಷೇತ್ರ ಫಲವತ್ತಾದ ಜಮೀನು ಆಗಿತ್ತು

ಎಂದರೆ ಸರಿಯಲ್ಲ.  ನಾವು ಖರೀದಿ ಮಾಡಿದಂತಹ ಸ್ವತ್ತು ರಸ್ತೆಗೆ ಲಗತ್ತು ಇದ್ದು, ಉತ್ತಮ ಮೌಲ್ಯ ಉಳ್ಳಂತಹ ಸ್ವತ್ತು ಅಗಿರುತ್ತದೆ ಎಂದರೆ ರಸ್ತೆಗೆ ಲಗತ್ತಾಗಿ ಇದೆ, ಆದರೆ ಉತ್ತಮ ಮೌಲ್ಯ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾವು ಖರೀದಿ ಮಾಡದ ಸರ್ವೇ ನಂ. ನ ಸ್ವತ್ತನ್ನು ಹೊರತುಪಡಿಸಿ 1 ನೇ ಪ್ರತಿವಾದಿಯ ಹಿಸ್ಸೆಗೆ ನೀಡಲಾದ ಇತರ ಸ್ವತ್ತುಗಳು ಗಜೀನಿ ಪ್ರದೇಶ ಹಾಗೂ ನೀರು ತುಂಬಿಕೊಳ್ಳುತಿದ್ದ ಜಮೀನುಗಳು ಆಗಿರುತ್ತು ಎಂದರೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ನಾಗಪ್ಪ ನಾರಾಯಣ ಗುನಗಾರವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದು ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ನಾವು ವಿಚಾರ ಮಾಡಿ ತಿಳಿದುಕೊಂಡಿರುವುದಿಲ್ಲ. ನಾವು ಖರೀದಿ ಮಾಡಿದ ಸ್ವತ್ತಿನ ಕ್ರಯ ಪತ್ರಕ್ಕೆ ವಾದಿ ಹಾಗೂ 3 ರಿಂದ 6 ನೇ ಪ್ರತಿವಾದಿಗಳು ಒಪ್ಪಿಗೆ ಸೂಚಿಸಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಕ್ರಯ ಪತ್ರಕ್ಕೆ 2 ನೇ ಪ್ರತಿವಾದಿಯು ಸಹ ಒಪ್ಪಿಗೆ ಸೂಚಿಸಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಾವು ಕ್ರಯಕ್ಕೆ ಪಡೆದ ನಂತರ 1 ನೇ ಪ್ರತಿವಾದಿಗೆ ವಾದಿ ಹಾಗೂ 3 ರಿಂದ 6 ನೇ ಪ್ರತಿವಾದಿಗಳು ಹೆಣ್ಣು ಮಕ್ಕಳು ಇರುವ ಬಗ್ಗೆ ನಮಗೆ ತಿಳಿದುಬಂದಿರುವುದಿಲ್ಲ. ವಾದಿ ಹಾಗೂ 3 ರಿಂದ 6 ನೇ ಪ್ರತಿವಾದಿಗಳ ಒಪ್ಪಿಗೆಯನ್ನು ಕ್ರಯ ದಸ್ತಾವೇಜಿನ ನಂತರದಲ್ಲಿ ಪಡೆದುಕೊಳ್ಳಲು ತೊಂದರೆ ಇತ್ತಾ ಎಂದರೆ ನಾಗಪ್ಪ ಗುನಗಾರವರಿಗೆ ಮಕ್ಕಳು ಇರುವ ಬಗ್ಗೆ ನಮಗೆ ತಿಳಿದುಬಂದಿರುವುದಿಲ್ಲ ಎಂದು ನುಡಿಯುತ್ತಾರೆ.  ನ್ಯಾಯಾಲಯದಿಂದ ದಾವೆಯ ಸಮನ್ಸ ಬಂದ ನಂತರದಲ್ಲಿ ಆ ಬಗ್ಗೆ ವಾದಿ ಅಥವಾ 3 ರಿಂದ 6 ನೇ ಪ್ರತಿವಾದಿಗಳನ್ನು ವಿಚಾರ ಮಾಡಿದ್ದೀರಾ ಎಂದರೆ ದಾವೆಯಲ್ಲಿ ನಮಗೆ ಸಮನ್ಸ ಜಾರಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ದಾವೆಯ ವಿಚಾರವಾಗಿ ಪತ್ರಿಕೆಯಲ್ಲಿ ಪ್ರಕಟವಾದ ನಂತರ ನಮಗೆ ತಿಳಿದುಬಂದಿರುತ್ತದೆ. ದಾವೆಯ ವಿಚಾರ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿದು ಬಂದ ನಂತರ ವಾದಿ ಅಥವಾ 3 ರಿಂದ 6 ನೇ ಪ್ರತಿವಾದಿಗಳನ್ನು ಭೇಟಿ ಮಾಡಿ ವಿಚಾರ ಮಾಡಿದ್ದೀರಾ ಎಂದರೆ ಮಾಡಿರುವುದಿಲ್ಲ.

1 ನೇ ಪ್ರತಿವಾದಿಯು ನಮಗೆ ಸ್ವತ್ತು ಮಾರಾಟ ಮಾಡಿದ ರೀತಿಯಲ್ಲಿಯೇ 7 ನೇ ಪ್ರತಿವಾದಿ ಹಾಗೂ ಇತರರಿಗೆ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ್ವತ್ತುನ್ನು ಖರೀದಿ ಮಾಡಿದ ನಂತರ ಸ್ವತ್ತನ್ನು ಬಿನ್ ಶೇತ್ಕಿಯಾಗಿ ಪರಿವರ್ತನೆ ಮಾಡಿಸಿದ್ದು, ಆ ಸಂದರ್ಭದಲ್ಲಿ ಸ್ವತ್ತಿಗೆ ಸಂಬಂಧಪಟ್ಟ ಹಿಂದಿನ ಪಹಣಿ ಪತ್ರಿಕೆ ಹಾಗೂ ಇತರ ದಾಖಲಾತಿಗಳನ್ನು ನಾನು ಪರಿಶೀಲಿಸಿರುವುದಿಲ್ಲ. ನಾನು ಸ್ವತ್ತನ್ನು ಬಿನ್ ಶೇತ್ಕಿಯಾಗಿ ಪರಿವರ್ತನೆ ಮಾಡಲು ಸಂದರ್ಭದಲ್ಲಿ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದು, ಆ ಸಂದರ್ಭದಲ್ಲಿ ಸ್ವತ್ತು ನಾಗಪ್ಪ ರವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತು ಎಂದು ನನಗೆ ತಿಳಿದು ಬಂದಿತು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ಗ್ರಾಮದಲ್ಲಿ ಒಳ್ಳೆಯ ಹೆಸರಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ಹಳಕಾರ ಗ್ರಾಮದಲ್ಲಿ ಇರುವಂತಹ ದೇವಸ್ಥಾನಗಳಲ್ಲಿ 1 ನೇ ಪ್ರತಿವಾದಿಯು ಅರ್ಚಕರಾಗಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಗೆ ಸಾಕಷ್ಟು ಆದಾಯ ಮೂಲಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ